ಮಾಡಿದ್ದೇವೆಂದು ಹೇಳಿ, ನಾಲ್ಕು ವರ್ಷಗಳಿಂದ ನಾಲ್ಕು ಸಾರಿ ನಂಜುಂಡಪ್ಪ ವರದಿಗೆ ದುಡ್ಡು ಇಟ್ಟಿದ್ದೇವೆ, 2,000 ಕೋಟಿ, 2800 ಕೋಟಿ, 3,000 ಕೋಟಿ ಹಣ ಇಟ್ಟಿದ್ದೇವೆಂದು ಹೇಳಿ ದುಡ್ಡು ಖರ್ಚು ಮಾಡಿಲ್ಲ, ಹಾಗಾದರೆ regional imbalance ಹೇಗೆ ಸರಿ ಹೋಗುತ್ತದೆ? ಬೆಂಗಳೂರು ಸಿಟಿ ಹಾಗೂ ಹುಬ್ಬಳ್ಳಿ ಟೌನ್‌ಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ರೇಪ್, ಮರ್ಡರ್, ನೀವು ಕೊಟ್ಟಿರುವ ರಿಪೋರ್ಟ್ ಇದೆ. ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದೆ ಎಂದು ಇದೆ. ಮೊನ್ನೆ ಬೆಂಗಳೂರಿನಿಂದ ಮೈಸೂರಿಗೆ ಹೋಗುವಾಗ ಒಬ್ಬ ಹೆಣ್ಣುಮಗಳಿಗೆ ನಾಲ್ಕೈದು ಹುಡುಗರು ರೈಲಿನಿಂದ ನೂಕಿದ್ದಾರೆ. ಯಾರಾದರೂ ಇರಲಿ. See, culprit is a culprit. Offender is an offender. Whether he is from Mysore or from Bangalore or he is from Hubli or he is from belgaum or Mangalore, or he is from Bijapur, ಎಲ್ಲಿಯವರಾದರೇನಂತೆ? Offender is an offender. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಲಿಲ್ಲ. ಡಿಮ್ಯಾಂಡ್‌ಗಳ ಮೇಲೆ ಸರಿಯಾಗಿ ಚರ್ಚೆಯಾಗಲಿಲ್ಲ. ಯಾವ ಇಲಾಖೆಯ ಮಂತ್ರಿಗಳು ಕೂಡ ಅವರವರ ಇಲಾಖೆಗೆ ಸಂಬಂಧಪಟ್ಟಂತೆ ಒಬ್ಬರೂ ಉತ್ತರ ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅವನ್ನು ಮುಟ್ಟುವುದಕ್ಕೂ ಹೋಗಲಿಲ್ಲ. ಆ ಕಾರಣದಿಂದ it is the most disappointing reply. ಮುಖ್ಯಮಂತ್ರಿಗಳಾಗಿ ಮೊದಲನೇ ಉತ್ತರ ಕೊಡುತ್ತಿದ್ದೀರಿ. ಮೊದಲೇ ಇಷ್ಟೊಂದು disappoint ಆಗಬಾರದಿತ್ತು.

ಶ್ರೀ ಜಗದೀಶ್ ಶೆಟ್ಟರ್ : – ಎಷ್ಟು ಉತ್ತರ ನೀಡಿದರೂ ನಿಮಗೆ ಸಮಾಧಾನವಾಗುವುದಿಲ್ಲ. ಬರ ಪರಿಹಾರದ ಬಗ್ಗೆ ಘೋಷಣೆ ಮಾಡಿದರೂ ನಿಮಗೆ ಸಮಾಧಾನ ಇಲ್ಲ.

ಶ್ರೀ ಸಿದ್ದರಾಮಯ್ಯ : – ನಾವು ಪ್ರತಿಭಟನೆ ಮಾಡಿ ನಾವು ಇಲ್ಲಿಂದ ವಾಕ್ ಔಟ್ ಮಾಡುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಸದನದಿಂದ ಹೊರನಡೆದರು)

ಅಧ್ಯಕ್ಷರು : – ಹೇಳಿ, ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : – ಸಾಲ ಮನ್ನಾ ಮಾಡಿದ್ದಕ್ಕೆ ರೈತರಿಗೆ ಅನ್ಯಾಯ ಮಾಡಿ ಸಭಾತ್ಯಾಗ ಮಾಡುತ್ತಿದ್ದೀರಿ. ಸಾಲ ಮನ್ನಾ ಮಾಡಿದ್ದನ್ನು

ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೀರಿ. ನಿಮಗೆ ದೇವರು ಒಳ್ಳೆಯದು ಮಾಡಲಿ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ನೀವು ಮಾತನಾಡಿ ಎಂದರೆ ಮಾತನಾಡುತ್ತೇವೆ.

ಅಧ್ಯಕ್ಷರು : – ಮಾತನಾಡಿ, ಯಾರು ಬೇಡವೆಂದು ಹೇಳಿದ್ದು?

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ಇಷ್ಟೊಂದು ಗಂಭೀರವಾಗಿ ರಾತ್ರಿ ಒಂದು ಗಂಟೆಯವರೆಗೆ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳೂ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟರು. ಅವರೂ ಕೂಡ ಇಡೀ ರಾತ್ರಿ ಕೂತು ಕೇಳಿದರು. ನಮಗೆ ಬಹಳಷ್ಟು ನಿರೀಕ್ಷೆ ಇತ್ತು. ಅದರಲ್ಲಿಯೂ ವಿಶೇಷವಾಗಿ ತಾವು ಹೇಳಿದಿರಿ. ಬರಗಾಲದಲ್ಲಿಯೂ ಮಾನ್ಯ ಪಶುಸಂಗೋಪನೆ ಸಚಿವರು ಇಲ್ಲಿಯೇ ಇದ್ದಾರೆ. ಫರ್ಟಿಲೈಸರ್ ಸಬ್ಸಿಡಿ ಇಡೀ ರಾಜ್ಯದಲ್ಲಿ ಎಲ್ಲಿ ನೋಡಿದರೂ ಡಿಮಾಂಡ್ ಇದೆ. ಇವತ್ತಿನವರೆಗೂ 50 % ಸಬ್ಸಿಡಿ ಅನೌನ್ಸ್ ಆಗಿಲ್ಲ, ಅದು ಬಹಳ ಜರೂರು ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ 50 % ಅನೌನ್ಸ್ ಮಾಡಿದ್ದರು. ಇಲ್ಲಿಯೇ ಪಕ್ಕದಲ್ಲಿ ಸಚಿವರು ಇದ್ದಾರೆ. ಅದು 50 % ಇದರಲ್ಲಿ ತೆಗೆದುಕೊಳ್ಳಬೇಕು. ವಿಶೇಷವಾಗಿ ತಾವು ಸುವರ್ಣ ಗ್ರಾಮದ ಬಗ್ಗೆ ಹೇಳಿದಿರಿ. ನಮ್ಮ ಭಾಗದಲ್ಲಿ ತಾವು ಹೇಳಿದ ಹಾಗೆ 5ನೇ ಹಂತದಲ್ಲಿ ತಾವು ಮೊನ್ನೆ ಅನೌನ್ಸ್ ಮಾಡಿದ್ದೀರಿ. ಆದರೂ ತಮ್ಮ ಗಮನಕ್ಕೆ ಒಂದು ಸಲಹೆ ತರುತ್ತೇನೆ. ನಾಲ್ಕನೇ ಹಂತದ್ದು ಈಗ ನಾಳೆ ನಾಡಿದ್ದು ಹೋಗಿ ಚಾಲನೆ ಕೊಡುತ್ತಿದ್ದೇವೆ. ಏಳು ಕೋಟಿ ರೂ. ಗಳಲ್ಲಿ ಈಗ ಒಂದು ಕೋಟಿ ಹಣ ಬಂದಿದೆ. ಹಾಗಾಗಿ ತಮ್ಮ ಅವಧಿಯಲ್ಲಿ ನಾಲ್ಕನೇ ಹಂತದ್ದೂ ಮುಗಿಯಬೇಕು, 5ನೇ ಹಂತದ್ದು ಮುಗಿಯಬೇಕು. ಅದು ಬಹಳ ಜರೂರು ಇದೆ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ. ವಿಶೇಷವಾಗಿ ಸಾಲ ಮನ್ನಾ ಬಗ್ಗೆ ಹೇಳಿದರಿ, ಇವತ್ತು ಮಾನ್ಯ ಯಡಿಯೂರಪ್ಪನವರೂ ಇಲ್ಲಿ ಕೂತಿದ್ದಾರೆ. ಮೊನ್ನೆ ಬಹಳ ಸಂತೋಷವಾಯಿತು ನಮಗೆಲ್ಲಾ 10,000 ಕೋಟಿ ಕೇಂದ್ರ ಸರ್ಕಾರ ಕೊಡಲಿ ಅಥವಾ ಬಿಡಲಿ ರಾಜ್ಯ ಸರ್ಕಾರ ನೀವು ಮಾಡಬೇಕೆಂದು ಹೇಳಿ ಆದೇಶ

ಕೊಟ್ಟರು. ಆದರೆ ಇವತ್ತು 3500 ಕೋಟಿ ತಂದು ಉಲ್ಟಾ ಅದು ಟ್ಯಾಕ್ಸ್ ವ್ಯಾಟ್‌ನಲ್ಲಿ 0.5% ಗೆ ಹೆಚ್ಚಿಗೆ ಮಾಡಿ ಅದರಲ್ಲಿ ಒಂದು ಕೋಟಿ ತೆಗೆದುಕೊಂಡು ರಾಜ್ಯದ ಜನತೆಗೆ ಯಾವ ನ್ಯಾಯ ಕೊಡುತ್ತಿದ್ದೀರಿ? ಆದರೆ 5 % ತೆರಿಗೆ ಹಾಕಿ. ರೈತರ ಸಾಲ ಮನ್ನಾ ಮಾಡಿದ್ದೀರಿ. ಹಿಂದೆ ಯಾವುದಾದರೂ ಸರ್ಕಾರ ಈ ತರಹ ಜನರ ಮೇಲೆ ಭಾರ ಹಾಕಿರಲಿಲ್ಲ. ಅದರದೇ ಆದ ಬೇರೆ ರೀತಿಯಿಂದ ಸಿಸ್ಟಮ್ ಆಗಿ ಮಾಡಿದ್ದರು. ಹಾಗಾಗಿ ದಯವಿಟ್ಟು ತಾವು ವ್ಯಾಟ್ ಜಾಸ್ತಿ ಮಾಡಬೇಕೆಂದು ಏನಿದ್ದೀರಿ ಅದನ್ನು ತಕ್ಷಣ ವಾಪಾಸ್ ತೆಗೆದುಕೊಳ್ಳಬೇಕು. ರಾತ್ರಿ ಒಂದು ಗಂಟೆಯವರೆಗೂ ವಿಚಾರಗಳನ್ನು ಹೇಳಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ಸ್ಪಂದಿಸದೆ ನಿರಾಶಾದಾಯಕ ಉತ್ತರ ನೀಡಿದ್ದಾರೆ.

ಶ್ರೀ ಆರ್. ಅಶೋಕ್ : – ಬರೀ ರಾಜ್ಯ ಸರ್ಕಾರದ್ದು ಹೇಳುತ್ತೀರಿ, ಕೇಂದ್ರ ಸರ್ಕಾರದ ಪಾಲು ಏನು ಎಂದು ಹೇಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ಮಾನ್ಯ ಅಶೋಕ್‌ರವರು ಹೇಳಿದ್ದು ಸರಿ ಇದೆ. ಕೇಂದ್ರ ಸರ್ಕಾರದವರು ಅಲ್ಲಿ ಕಂಗಾಲು ಮಾಡಿದ್ದಾರೆ. ರಾಜ್ಯ ಸರ್ಕಾರದವರು ಇಲ್ಲಿ ಕಂಗಾಲು ಮಾಡಿದ್ದಾರೆ. ಇಡೀ ರಾಜ್ಯದ ಜನತೆಗೆ ಇವರಿಬ್ಬರೂ ಸೇರಿ ಕಂಗಾಲು ಮಾಡಿದ್ದಾರೆಂದು ಹೇಳಬಯಸುತ್ತೇನೆ. ಹಾಗಾಗಿ ಇವತ್ತು ಇವರು ಕೊಟ್ಟಿರುವಂತಹ ಉತ್ತರ ಸಮಂಜಸವಿಲ್ಲ ಹಾಗಾಗಿ ನಾವು ನಮ್ಮ ಪಕ್ಷದವರು ವಾಕ್ ಔಟ್ ಮಾಡುತ್ತಿದ್ದೇವೆ. ರೈತರಿಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದನ್ನು ನಾವು welcome ಮಾಡುತ್ತೇವೆ. ಆದರೆ indirectly 0.5% ತೆರಿಗೆ ಹಾಕಿ. ಜನ ಸಾಮಾನ್ಯರಿಗೆ ತೊಂದರೆ ಕೊಡುತ್ತಿದ್ದೀರಿ.

ಒಬ್ಬ ಮಾನ್ಯ ಸದಸ್ಯರು : – 25 ಸಾವಿರದವರೆಗೂ ಸಾಲ ಮನ್ನಾ ಬಗ್ಗೆ ಹೇಳಿಒದ್ದಾರಲ್ಲ?

ಶ್ರೀ ಬಂಡೆಪ್ಪ ಖಾಶೆಂಪುರ್:– 25 ಸಾವಿರದ ಬಗ್ಗೆಯೂ ಹೇಳುತ್ತಿದ್ದೇನೆ. ಹಿಂದಿನ ಸರ್ಕಾರಗಳು ಮಾಡಿದಾಗಲೂ ಈ ರೀತಿಯಲ್ಲಿ ಜನರ ಮೇಲೆ ಭಾರ ಹಾಕುತ್ತಿರಲಿಲ್ಲ. ಅವರದೇ ಆದಂಥ ರೀತಿಯಲ್ಲಿ ಅವರದ್ದೇ ಸಿಸ್ಟಂನಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದರು. ಈಗ ತಾವೇನು ವ್ಯಾಟ್ ಜಾಸ್ತಿ ಮಾಡಬೇಕೆಂದಿದ್ದೀರಿ ಅದನ್ನು ತಕ್ಷಣ ವಾಪಾಸ್ ತೆಗೆದುಕೊಳ್ಳಬೇಕು. ಇನ್ನು ಬ್ಯಾಕ್‌ಲಾಗ್...

ಶ್ರೀ ಕೆ.ಎಸ್. ಈಶ್ವರಪ್ಪ : – ಖಾಶೆಂಪೂರ್‌ರವರೆ, ರೇವಣ್ಣನವರು ಎಲ್ಲಿ?

ಅಧ್ಯಕ್ಷರು : – ಈಶ್ವರಪ್ಪನವರೆ, ನೀವು ಕುಳಿತುಕೊಳ್ಳಿ. ಅವರು ಮಾತನಾಡಲಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಅವರು ಜಗದೀಶ್ ಶೆಟ್ಟರ್‌ರವರು ಸಾಹೇಬರಿಗೆ ಈಶ್ವರಪ್ಪನವರಿಗೆ ಮತ್ತು ಅಶೋಕ್‌ರವರನ್ನು ನಾನು ಕೇಳಿಕೊಂಡೇ ಹೋಗುತ್ತಿದ್ದೇನೆ ಎಂದು ಹೇಳಿ ಹೋದರು. ಮಾನ್ಯ ಅಧ್ಯಕ್ಷರೆ, ರಾತ್ರಿ 1.00 ಗಂಟೆಯವರೆಗೂ ಹಲವಾರು ವಿಚಾರಗಳನ್ನು ಹೇಳಿದ್ದರೂ ಕೂಡ ಮುಖ್ಯಮಂತ್ರಿಗಳು ಸ್ಪಂದಿಸದೆ ನಿರಾಶಾದಾಯಕ ಉತ್ತರ ನೀಡಿದ್ದಾರೆ.

ಶ್ರೀ ಆರ್. ಅಶೋಕ್ : – ನೀವು ಬರೇ ರಾಜ್ಯ ಸರ್ಕಾರದ್ದು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರದ ಪಾಲೇನು ಎಂಬ ಬಗ್ಗೆ ನೀವು ಮಾತನಾಡಲೇ ಇಲ್ಲವಲ್ಲ? ಕೇಂದ್ರ ಸರ್ಕಾರದ್ದು ಹೇಳಲೇ ಇಲ್ಲವಲ್ಲ?

ಅಧ್ಯಕ್ಷರು : – ಅಶೋಕ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಂಡೆಪ್ಪ ಖಾಶೆಂಪೂರ್ : – ಮಾನ್ಯ ಅಧ್ಯಕ್ಷರೆ, ಮಾನ್ಯ ಅಶೋಕ್‌ರವರು ಹೇಳಿದ್ದು ಸರಿಯಿದೆ. ಕೇಂದ್ರ ಸರ್ಕಾರದವರು ಅಲ್ಲಿ ಕಂಗಾಲು ಮಾಡಿದ್ದಾರೆ. ರಾಜ್ಯ ಸರ್ಕಾರದವರು ಇಲ್ಲಿ ಕಂಗಾಲು ಮಾಡಿದ್ದಾರೆ. ಇಡೀ ರಾಜ್ಯದ ಜನತೆಗೆ ಇವರಿಬ್ಬರೂ ಸೇರಿ ಕಂಗಾಲು ಮಾಡಿದ್ದಾರೆಂದು ಹೇಳಬಯಸುತ್ತೇನೆ. ಹೀಗಾಗಿ ಇವರು ಕೊಟ್ಟಿರುವಂಥ ಉತ್ತರ ಸಮಂಜಸವಾಗಿಲ್ಲ. ಅದಕ್ಕಾಗಿ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತಿದ್ದೇವೆ. (ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು.)

ಶ್ರೀ ಜಗದೀಶ್ ಶೆಟ್ಟರ್ : – ಮಾನ್ಯ ಅಧ್ಯಕ್ಷರೆ, ದಿ : 31.03.2013 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1 ರಿಂದ 28, ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : – 2012–13 ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.